7-7-2026
UDAYAVANI - MANIPAL


### ಮಣಿಪಾಲ ಕಸ್ತೂರ್ಬಾ ಆಸ್ಪತ್ರೆ

# ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

ಮಣಿಪಾಲ, ಜು. 6: ಮಾಹೆ ವಿವಿಯ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಯ ಮೂತ್ರಪಿಂಡದಿಂದ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿದ್ದ ಅಪರೂಪದ ಕ್ಯಾನ್ಸರ್ ಗಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ಯಶಸ್ವಿಯಾಗಿ ತೆರವುಗೊಳಿಸಿದ್ದಾರೆ.

ತಿಂಗಳಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದ ರೋಗಿಯ ಎಡ ಮೂತ್ರ ಪಿಂಡದಲ್ಲಿ ಕ್ಯಾನ್ಸರ್ ಗಡ್ಡೆ ಪತ್ತೆ ಯಾಗಿದ್ದು ಅದು ಕೆಳಮಟ್ಟದ ವೆನಾ ಕ್ಯಾವಾ **(Inferior Vena Cava–IVC)** ಮೂಲಕ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿತ್ತು.

ರೋಗಿಗೆ ಹೃದಯಶಾಸ್ತ್ರ ಮತ್ತು ಎಂಡೋಕ್ರಿನೊಲೊಜಿ ವಿಭಾಗಗಳು ಚಿಕಿತ್ಸೆ ನೀಡಿ ಶಸ್ತ್ರಚಿಕಿತ್ಸೆಗೆ ಸಜ್ಜುಗೊಳಿಸಿದವು. ಜೂ. 17ರಂದು ಮೂತ್ರ ಶಾಸ್ತ್ರ ಹಾಗೂ ಹೃದಯ,



ಎದೆ ಮತ್ತು ರಕ್ತನಾಳಗಳ ಶಸ್ತ್ರ ಚಿಕಿತ್ಸಾ ವಿಭಾಗಗಳ ತಂಡದಿಂದ 12 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿತು. ಹೃದಯ–ಶ್ವಾಸಕೋಶಯಂತ್ರದನೆರವು ಹಾಗೂ ಸಂಪೂರ್ಣ ರಕ್ತಪರಿಚಲನ ಸ್ತಂಭನ ತಂತ್ರ ಬಳಸಿ ಹೃದಯ ಮತ್ತು ಐವಿಸಿಯಿಂದ ಗಡ್ಡೆಯನ್ನು ಒಂದೇ ತುಂಡಿನಲ್ಲಿ ತೆರವು ಗೊಳಿಸಲಾಯಿತು.

ಶಸ್ತ್ರಚಿಕಿತ್ಸೆಯಲ್ಲಿ ಸಿಟಿವಿಎಸ್ ವಿಭಾಗದ ಹಿರಿಯ ತಜ್ಞರಾದ ಡಾ। ಶ್ಯಾಮ್ ಕೆ. ಅಶೋಕ್, ಡಾ। ಗಣೇಶ್ ಕಾಮತ್, ಡಾ। ಜಿ. ವಿ. ಶ್ರೀನಾಥ್, ಅರಿವಳಿಕೆ ತಜ್ಞರಾದ ಡಾ। ವಿಜಯ್ ಕುಮಾರ್, ಡಾ। ಸಾಯಿ ಕೃಷ್ಣ ಪರ್ಫ್ಯೂಷನ್ ತಂಡ, ತೀವ್ರ ನಿಗಾ ತಂಡ ಹಾಗೂ ಅಂತಃಸ್ರಾವಶಾಸ್ತ್ರ ವಿಭಾಗಗಳ ತಜ್ಞರು ಭಾಗವಹಿಸಿದ್ದರು.

ನಮ್ಮ ಅನುಭವಿ ವೈದ್ಯರ ತಂಡದ ನಿಖರ ಯೋಜನೆ ಹಾಗೂ ಆಸ್ಪತ್ರೆಯ ಸುಧಾರಿತ ಸೌಲಭ್ಯಗಳಿಂದ ಈ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ ಎಂದು ಡಾ। ಅರುಣ್ ಚಾವ್ಲಾ ತಿಳಿಸಿದರು.

ಇಂತಹ ಶಸ್ತ್ರಚಿಕಿತ್ಸೆಗಳನ್ನು ನಡೆಸಲು ಪರಿಣತ ವೈದ್ಯರು, ಅತ್ಯಾಧುನಿಕ ಸೌಲಭ್ಯಗಳು ಮತ್ತು ಸುಸಜ್ಜಿತ ತೀವ್ರ ನಿಗಾ ವ್ಯವಸ್ಥೆಯೇ ನಮ್ಮ ಶಕ್ತಿ. ಪ್ರತೀ ರೋಗಿಗೂ ಸುರಕ್ಷಿತ ಆರೋಗ್ಯ ಸೇವೆ ನೀಡುವುದು ನಮ್ಮ ಬದ್ಧತೆ ಎಂದು ಮಾಹೆ ಬೋಧನ ಆಸ್ಪತ್ರೆಗಳ ಸಿಒಒ ಡಾ। ಸುಧಾಕರ್ ಕಂಟಿಪುಡಿ ಹೇಳಿದರು.

www.vijayavani.net

ನಂ.1 ವಿಜಯವಾಣಿ
ಕನ್ನಡ ದಿನಪತ್ರಿಕೆ

## ಮೂತ್ರಪಿಂಡದಿಂದ ಹೃದಯದವರೆಗೆ ಹರಡಿದ್ದ ಕ್ಯಾನ್ಸರ್ ಗಡ್ಡೆ ತೆರವು

# ಕಸ್ತೂರ್ಬಾ ಆಸ್ಪತ್ರೆಯಿಂದ ಯಶಸ್ವಿ ಶಸ್ತ್ರಚಿಕಿತ್ಸೆ

**ಉಡುಪಿ:** ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಶಿವಮೊಗ್ಗದ 63 ವರ್ಷದ ರೋಗಿಗೆ ಅತ್ಯಂತ ಅಪೂರ್ವ ಮತ್ತು ಸಂಕೀರ್ಣ ಶಸ್ತ್ರಚಿಕಿತ್ಸೆ ನಡೆಸುವ ಮೂಲಕ ಮರುಜೀವ ನೀಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಿಂದ ಆರಂಭವಾಗಿ ದೇಹದ ಅತಿದೊಡ್ಡ ರಕ್ತನಾಳದ ಮೂಲಕ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿದ್ದ ಕ್ಯಾನ್ಸರ್ ಗಡ್ಡೆಯನ್ನು ವೈದ್ಯರ ತಂಡ ಯಶಸ್ವಿಯಾಗಿ ತೆರವುಗೊಳಿಸಿದೆ.

ಒಂದು ತಿಂಗಳಿನಿಂದ ತೀವ್ರ ಹೊಟ್ಟೆನೋವಿನಿಂದ ಬಳಲುತ್ತಿದ್ದ ರೋಗಿಯನ್ನು ಪರೀಕ್ಷಿಸಿದಾಗ ಅವರ ಎಡ ಮೂತ್ರಪಿಂಡದಲ್ಲಿ ಕ್ಯಾನ್ಸರ್ ಗಡ್ಡೆ ಇರುವುದು ಪತ್ತೆಯಾಗಿತ್ತು. ಗೆಡ್ಡೆಯು 'ಟ್ಯೂಮರ್ ಥ್ರಂಬಸ್' ರೂಪದಲ್ಲಿ ಕೆಳಮಟ್ಟದ ವೆನಾ ಕ್ಯಾವಾ ರಕ್ತನಾಳದ ಮೂಲಕ ಹೃದಯದವರೆಗೂ ವಿಸ್ತರಿಸಿತ್ತು. ಇದು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸವಾಲಿನ ಮತ್ತು ಅಪಾಯಕಾರಿ ಹಂತವಾಗಿದೆ.

**12 ಗಂಟೆಗಳ ಜಟಿಲ ಕಾರ್ಯಾಚರಣೆ:** ಜೂನ್ 17ರಂದು 12 ಗಂಟೆಗಳ ಕಾಲ ನಡೆದ ಶಸ್ತ್ರಚಿಕಿತ್ಸೆಯಲ್ಲಿ ಮೂತ್ರಶಾಸ್ತ್ರ ಮತ್ತು ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸಾ ವಿಭಾಗದ ತಜ್ಞರು ಕೈಜೋಡಿಸಿದರು. ಶಸ್ತ್ರಚಿಕಿತ್ಸೆ ವೇಳೆ ರೋಗಿಯ ದೇಹದ ಉಷ್ಣತೆಯನ್ನು 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಿ, ರಕ್ತ ಪರಿಚಲನೆಯನ್ನು ಕೆಲಕಾಲ ಸಂಪೂರ್ಣವಾಗಿ ಸ್ಥಗಿತಗೊಳಿಸುವ ಅತೀ ಸೂಕ್ಷ್ಮತಂತ್ರವನ್ನು ಬಳಸಲಾಯಿತು. ಈ ಸೀಮಿತ ಅವಧಿಯಲ್ಲೇ ವೈದ್ಯರು ಅತ್ಯಂತ ನಿಖರವಾಗಿ ಹೃದಯ ಮತ್ತು ರಕ್ತನಾಳಗಳಿಂದ ಗಡ್ಡೆಯನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾದರು.

ಶಸ್ತ್ರಚಿಕಿತ್ಸೆಯಲ್ಲಿ ಮೂತ್ರಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅರುಣ್ ಚಾವ್ಲಾ, ಸಹಾಯಕ ಪ್ರಾಧ್ಯಾಪಕ ಡಾ.ಜಿ.ವಿ.ಶ್ರೀನಾಥ್, ಹಿರಿಯ ತಜ್ಞ ವೈದ್ಯರಾದ ಡಾ.ಶ್ಯಾಮ್ ಕೆ.ಅಶೋಕ್ ಹಾಗೂ ಡಾ.ಗಣೇಶ್ ಕಾಮತ್ ನೇತೃತ್ವ ವಹಿಸಿದ್ದರು.

### ಆರೋಗ್ಯದತ್ತ ರೋಗಿ

**ಶಸ್ತ್ರಚಿಕಿತ್ಸೆಯ ನಂತರ ರೋಗಿ ಚೇತರಿಸಿಕೊಂಡಿದ್ದು, ಯಾವುದೇ ನರವೈಜ್ಞಾನಿಕ ತೊಂದರೆಗಳಿಲ್ಲದೆ ಆರೋಗ್ಯವಾಗಿದ್ದಾರೆ. ಎರಡು ವಾರಗಳ ಚಿಕಿತ್ಸೆ ಬಳಿಕ ಆಸ್ಪತ್ರೆಯಿಂದ ಬಿಡುಗಡೆಗೊಂಡ ಅವರು, ಇದೀಗ ಶಿವಮೊಗ್ಗದಲ್ಲಿ ವೈದ್ಯರ ಸಲಹೆಯಂತೆ ವಿಶ್ರಾಂತಿ ಪಡೆಯುತ್ತಿದ್ದಾರೆ.**

ವಿಜಯ ಕರ್ನಾಟಕ

ಬುಧವಾರ,8 ಜುಲೈ 2026,
ಮಂಗಳೂರು

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

■ **ವಿಕ ಸುದ್ದಿಲೋಕ** ಉಡುಪಿ

ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ಅಂಗಸಂಸ್ಥೆ ಯಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯವಾಗಿ ಮರಳುವಂತೆ ಮಾಡಿದ್ದಾರೆ.

ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆ ದೇಹದ ಅತಿ ದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾಕ್ಯಾವಾ ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣದವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

ರೋಗಿಯು ಸುಮಾರು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆ ಮತ್ತು ಸ್ಕ್ಯಾನ್‌ಗಳಲ್ಲಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದನ್ನು ಪತ್ತೆ ಹಚ್ಚಲಾಯಿತು. ಆ ಗೆಡ್ಡೆಯು ಟ್ಯೂಮರ್ ಥ್ರಂಬಸ್ ರೂಪದಲ್ಲಿ ಕೆಳ ಮಟ್ಟದ ವೆನಾಕ್ಯಾವಾ(ಹೃದಯಕ್ಕೆ ರಕ್ತವನ್ನು ಮರಳಿ ಸಾಗಿಸುವ ಪ್ರಮುಖ ರಕ್ತನಾಳ) ಮೂಲಕ ವಿಸ್ತರಿಸಿ, ಹೃದಯದ ಬಲ ಹೃತ್ಕರ್ಣದ ವರೆಗೆ ತಲುಪಿರುವುದು ದೃಢಪಟ್ಟಿತು.

ರೋಗಿಯನ್ನು ಮೂತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಘಟಕದ ಮುಖ್ಯಸ್ಥ ಡಾ.ಅರುಣ್ ಚಾವ್ಲಾ ಅವರ ನೇತೃತ್ವದಲ್ಲಿ ದಾಖಲಿಸಿಕೊಳ್ಳಲಾಯಿತು. ಮೂತ್ರಶಾಸ್ತ್ರ ತಂಡವು ರೋಗಿಯ ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ ವಿಭಾಗದ ತಜ್ಞರೊಂದಿಗೆ ಸಮನ್ವಯ ಸಾಧಿಸಿ ಶಸ್ತ್ರಚಿಕಿತ್ಸೆಯ ಸಮಗ್ರ ಯೋಜನೆಯನ್ನು ರೂಪಿಸಿತು. ರೋಗಿಯು ಮಧುಮೇಹ, ಅಧಿಕ ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ ಹಾಗೂ ಸೌಮ್ಯ ಹೃದಯ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ, ಹೃದಯಶಾಸ್ತ್ರ ಮತ್ತು ಎಂಡೋಕ್ರಿನೊಲೊಜಿ ವಿಭಾಗಗಳ ತಜ್ಞರು ಮೊದಲು ಅವರ ಆರೋಗ್ಯ ಸ್ಥಿತಿಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿ, ಶಸ್ತ್ರಚಿಕಿತ್ಸೆಗೆ ಸೂಕ್ತವಾಗುವಂತೆ ಚಿಕಿತ್ಸೆ ನೀಡಿದರು.

2026ರ ಜೂ.17ರಂದು ಮೂತ್ರಶಾಸ್ತ್ರ ಹಾಗೂ ವಿಭಾಗಗಳ ತಜ್ಞರ ತಂಡಗಳು ಒಂದೇ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಸುಮಾರು 12 ಗಂಟೆಗಳ ಕಾಲ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿತು. ರೋಗಿಯ ಸಂಪೂರ್ಣ ರಕ್ತ ಪರಿಚಲನೆಯನ್ನು ನಿಲ್ಲಿಸಿ ಗೆಡ್ಡೆಯನ್ನು ತೆಗೆದು ಹಾಕುವುದು ಅತ್ಯಂತ ಅಪರೂಪದ ವಿಧಾನವಾಗಿದ್ದು, ಇದಕ್ಕೆ ಹೃದಯ ಶಸ್ತ್ರಚಿಕಿತ್ಸಾ ಮತ್ತು ಪರ್ಫ್ಯೂಷನ್ ತಂಡಗಳಿಂದ ಉನ್ನತ ಮಟ್ಟದ ಪರಿಣತಿ ಬೇಕಾಗುತ್ತದೆ. ಈ ಹಂತದಲ್ಲಿ ಒಂದು ಸಣ್ಣ ದೋಷವೂ ಸಹ ಮೆದುಳು ಅಥವಾ ಇತರ ಅಂಗಗಳಿಗೆ ಶಾಶ್ವತ ಹಾನಿಯನ್ನುಂಟು ಮಾಡಬಹುದು. ನರವೈಜ್ಞಾನಿಕ ತೊಡಕು ಗಳಿಲ್ಲದೆ ರೋಗಿಯ ಚೇತರಿಕೆಯು ಪರಿಣತ ಶಸ್ತ್ರಚಿಕಿತ್ಸಾ ತಂಡಗಳ ಶಕ್ತಿ ಮತ್ತು ಪರಿಣತಿಗೆ ಪ್ರಬಲ ಸಾಕ್ಷಿಯಾಗಿದೆ.

ಸುಮಾರು 12 ಗಂಟೆಗಳ ಕಾಲ ನಡೆದ ಸಂಕೀರ್ಣ ಶಸ್ತ್ರಚಿಕಿತ್ಸೆಯ ಬಳಿಕ, ರೋಗಿಯನ್ನು ಚೇತರಿಕೆಗೆ ನೆರವಾಗುವ ಉದ್ದೇಶದಿಂದ ತೀವ್ರ ನಿಗಾ ಘಟಕದಲ್ಲಿ ಸುಮಾರು 12 ಗಂಟೆಗಳ ಕಾಲ ವೆಂಟಿಲೇಟರ್ ಬೆಂಬಲದಲ್ಲಿ ಇರಿಸಲಾಯಿತು. ನಂತರ ಅವರನ್ನು ಯಶಸ್ವಿಯಾಗಿ ವೆಂಟಿಲೇಟರ್‌ನಿಂದ ಹೊರತೆಗೆದು ಅವರು ಸ್ವಯಂ ಉಸಿರಾಟವನ್ನು ಆರಂಭಿಸಿದರು. ಶಸ್ತ್ರಚಿಕಿತ್ಸೆಯ ಸುಮಾರು ಎರಡು ವಾರಗಳ ಬಳಿಕ ಆರೋಗ್ಯ ಸ್ಥಿರ ಗೊಂಡ ಹಿನ್ನೆಲೆಯಲ್ಲಿ ಅವರನ್ನು ಆಸ್ಪತ್ರೆ ಯಿಂದ ಬಿಡುಗಡೆ ಮಾಡಲಾಯಿತು.

ಶಸ್ತ್ರಚಿಕಿತ್ಸೆಗೆ ಹೃದಯ ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ ವಿಭಾಗದ ಹಿರಿಯ ತಜ್ಞ ಡಾ.ಶ್ಯಾಮ್ ಕೆ. ಅಶೋಕ್ ಹಾಗೂ ಡಾ.ಗಣೇಶ್ ಕಾಮತ್, ಮೂತ್ರಶಾಸ್ತ್ರ ವಿಭಾಗದ ಹಿರಿಯ ತಜ್ಞ ಡಾ.ಅರುಣ್ ಚಾವ್ಲಾ ಹಾಗೂ ಸಹಾಯಕ ಪ್ರಾಧ್ಯಾಪಕ ಡಾ.ಜಿ.ವಿ.ಶ್ರೀನಾಥ್ ಶಸ್ತ್ರಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅರಿವಳಿಕೆ ತಜ್ಞರಾದ ಡಾ.ವಿಜಯ್ ಕುಮಾರ್, ಡಾ. ಸಾಯಿಕೃಷ್ಣ, ಪರ್ಫ್ಯೂಷನ್ ತಂಡ, ತೀವ್ರ ನಿಗಾ ಮತ್ತು ಅಂತಃಸ್ರಾವಶಾಸ್ತ್ರ ವಿಭಾಗಗಳ ತಜ್ಞರ ಸಮನ್ವಯ ಮತ್ತು ಬೆಂಬಲದೊಂದಿಗೆ ಈ ಬಹುಶಾಖಾ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ಮೂತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹಾಗೂ ಘಟಕದ ಮುಖ್ಯಸ್ಥ ಡಾ. ಅರುಣ್ ಚಾವ್ಲಾ ಹಾಗೂ ಮಾಹೆ ಮಣಿಪಾಲದ ಬೋಧನಾ ಆಸ್ಪತ್ರೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಸುಧಾಕರ್ ಕಂಟಿಪುಡಿ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬುಧವಾರ • ಜುಲೈ 8, 2026
ಪ್ರಜಾವಾಣಿ

# ಕಸ್ತೂರಬಾ ಆಸ್ಪತ್ರೆಯಲ್ಲಿ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

ಪ್ರಜಾವಾಣಿ ವಾರ್ತೆ

ಉಡುಪಿ: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್‌ನ ಅಂಗಸಂಸ್ಥೆಯಾದ ಮಣಿಪಾಲದ ಕಸ್ತೂರಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದ್ದಾರೆ.

ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣದವರೆಗೆ ತಲುಪಿತ್ತು. ಅಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತ ಗಳಲ್ಲಿ ಒಂದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರೋಗಿಯು ಸುಮಾರು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆ ಮತ್ತು ಸ್ಕ್ಯಾನ್‌ಗಳಲ್ಲಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಜೊತೆಗೆ ಆ ಗೆಡ್ಡೆಯು ಟ್ಯೂಮರ್ ಥ್ರಂಬಸ್ ರೂಪದಲ್ಲಿ ಕೆಳಮಟ್ಟದ ವೆನಾ ಕ್ಯಾವಾ ಮೂಲಕ ವಿಸ್ತರಿಸಿ, ಹೃದಯದ ಬಲ ಹೃತ್ಕರ್ಣದ ವರೆಗೆ ತಲುಪಿರುವುದು ದೃಢಪಟ್ಟಿತು ಎಂದು ಹೇಳಿದೆ.

ಮೂತ್ರವಿಜ್ಞಾನ ವಿಭಾಗದ ಮುಖ್ಯಸ್ಥ ಡಾ.ಅರುಣ್ ಚಾವ್ಲಾ ಅವರ ನೇತೃತ್ವದ ವೈದ್ಯರ ತಂಡವು, ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ ವಿಭಾಗದ ತಜ್ಞರೊಂದಿಗೆ ಸಮನ್ವಯ ಸಾಧಿಸಿ ಶಸ್ತ್ರಚಿಕಿತ್ಸೆಯ ಸಮಗ್ರ ಯೋಜನೆಯನ್ನು ರೂಪಿಸಿತು. ವಿವಿಧ ವಿಭಾಗಗಳ ತಜ್ಞರ ತಂಡ ಒಂದೇ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಸುಮಾರು 12 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿದೆ. ಮೂರು ದಿನದಲ್ಲಿ ರೋಗಿಯು ನಡೆದಾಡುವಷ್ಟು ಚೇತರಿಸಿಕೊಂಡರು. ಶಸ್ತ್ರಚಿಕಿತ್ಸೆಯ ಸುಮಾರು ಎರಡು ವಾರಗಳ ಬಳಿಕ ಆರೋಗ್ಯ ಸ್ಥಿರಗೊಂಡ ಕಾರಣ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು ಎಂದು ಪ್ರಕಟಣೆ ತಿಳಿಸಿದೆ.

ಡಾ.ಶ್ಯಾಮ್ ಕೆ.ಅಶೋಕ್, ಡಾ.ಗಣೇಶ್ ಕಾಮತ್, ಡಾ.ಅರುಣ್ ಚಾವ್ಲಾ, ಡಾ.ಜಿ.ವಿ.ಶ್ರೀನಾಥ್ ಶಸ್ತ್ರಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅರಿವಳಿಕೆ ತಜ್ಞರಾದ ಡಾ.ವಿಜಯ್ ಕುಮಾರ್ ಮತ್ತು ಡಾ.ಸಾಯಿ ಕೃಷ್ಣ ಸಹಕರಿಸಿದ್ದರು.

DH
DECCAN HERALD
E-PAPER

# Kasturba Hospital removes a kidney tumour that had spread into the heart

**MANGALURU, DHNS:** Doctors at Kasturba Hospital, Manipal have successfully treated a 63-year-old man from Shivamogga whose kidney cancer had grown along the body's largest vein and reached the right chamber of his heart.

The patient presented with abdominal pain of one month's duration. Scans revealed a large cancerous tumour in his left kidney with a tumor thrombus, a solid extension of the cancer, that had travelled up the inferior vena cava (the major vein carrying blood back to the heart) all the way into the heart's right upper chamber.

The patient was admitted under Dr Arun Chawla, Professor and Head of Unit, Department of Urology, whose team planned the operation jointly with the Department of Cardiothoracic and Vascular Surgery (CTVS). As the patient also lives with diabetes, high blood pressure, a thyroid condition, and mild heart disease, the Cardiology and Endocrinology teams first assessed and optimised him for surgery.

The surgery lasted for 12 hours. The urology team began by opening the abdomen, removing the cancerous kidney, and freeing the tumor along the vein. The CTVS team then opened the chest through the breastbone and connected the patient to a heart-lung machine, a device that temporarily takes over the work of the heart and lungs. The patient's body was then gradually cooled to 22 degrees Celsius, well below normal body temperature, to protect the brain and vital organs. This cooling was essential because the blood circulation through his entire body needed to be stopped completely, a state known as total circulatory arrest, to safely remove the tumor from the right atrium of the heart and the IVC (inferior vena cava).

With the circulation stopped, the surgeons had a brief but critical window. They opened the right atrium of the heart and the IVC simultaneously and, working in precise coordination, the urology and CTVS teams removed the entire tumor in one continuous piece without the risk of any fragment breaking away into the bloodstream. Complete clearance was confirmed by passing a thin camera through the vein. Once the tumor was fully removed, the right chamber of the heart was closed, and the IVC was repaired. The blood circulation was then restarted, and the patient was rewarmed back to normal body temperature before being gradually weaned off the heart-lung machine.

"When a kidney tumour reaches the heart, a routine cancer operation becomes a combined effort of two surgical teams working as one" said Dr Arun Chawla.

ಹೊಸ ದಿಗಂತ

ಬುಧವಾರ
8 ಜುಲೈ 2026

# ಮಣಿಪಾಲ ಕೆಎಂಸಿ: ಹೃದಯದವರೆಗೆ ಹರಡಿದ್ದ ಕ್ಯಾನ್ಸರ್ ಗೆಡ್ಡೆ ತೆರವುಗೊಳಿಸಿ ವ್ಯಕ್ತಿಗೆ ಮರುಜೀವ

• **ಮಣಿಪಾಲ:** ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ (ಕೆಎಂಸಿ) ವೈದ್ಯರು ಶಿವಮೊಗ್ಗ ಮೂಲದ 63 ವರ್ಷದ ವೃದ್ಧರೊಬ್ಬರ ಮೂತ್ರಪಿಂಡದಿಂದ ಹೃದಯದವರೆಗೆ ಹರಡಿದ್ದ ಅತ್ಯಂತ ಅಪರೂಪದ ಹಾಗೂ ಸಂಕೀರ್ಣ ಕ್ಯಾನ್ಸರ್ ಗೆಡ್ಡೆಯನ್ನು ಯಶಸ್ವಿ ಶಸ್ತ್ರಚಿಕಿತ್ಸೆ ಮೂಲಕ ಹೊರತೆಗೆದು ಮರುಜೀವ ನೀಡಿದ್ದಾರೆ.

ರೋಗಿಯ ಎಡ ಮೂತ್ರಪಿಂಡದಲ್ಲಿದ್ದ ಕ್ಯಾನ್ಸರ್ ಗೆಡ್ಡೆಯು ಪ್ರಮುಖ ರಕ್ತನಾಳದ ಮೂಲಕ ಹೃದಯದ ಬಲ ಹೃತ್ಕರ್ಣದ ವರೆಗೆ ವಿಸ್ತರಿಸಿತ್ತು. ಮೂತ್ರಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅರುಣ್ ಚಾವ್ಲಾ ಹಾಗೂ



ಹೃದಯ ಶಸ್ತ್ರಚಿಕಿತ್ಸಾ ತಜ್ಞರ ಜಂಟಿ ತಂಡಗಳು ಸುಮಾರು 12 ಗಂಟೆಗಳ ಕಾಲ ಸುದೀರ್ಘ ಶಸ್ತ್ರಚಿಕಿತ್ಸೆ ನಡೆಸಿದವು. ಈ ವೇಳೆ ರೋಗಿಯ ದೇಹದ ಉಷ್ಣತೆಯನ್ನು 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಿ, ರಕ್ತಪರಿಚಲನೆಯನ್ನು ತಾತ್ಕಾಲಿಕವಾಗಿ ಸಂಪೂರ್ಣ ಸ್ಥಗಿತಗೊಳಿಸುವ ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಹೃದಯದ ಒಳಗಿದ್ದ ಗೆಡ್ಡೆಯನ್ನು ಸುರಕ್ಷಿತವಾಗಿ ಹೊರತೆಗೆಯಲಾಯಿತು.

ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು, ವೃದ್ಧರು ಸಂಪೂರ್ಣ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆಗೊಂಡು ಶಿವಮೊಗ್ಗದ ತಮ್ಮ ಸ್ವಗ್ರಾಮಕ್ಕೆ ಮರಳಿದ್ದಾರೆ. ಆಸ್ಪತ್ರೆಯ ಸುಧಾರಿತ ತಂತ್ರಜ್ಞಾನ ಹಾಗೂ ವಿವಿಧ ವಿಭಾಗಗಳ ವೈದ್ಯರ ಅದ್ಭುತ ಸಮನ್ವಯವೇ ಈ ಅಪರೂಪದ ಸಾಧನೆಗೆ ಕಾರಣ ಎಂದು ಆಸ್ಪತ್ರೆಯ ಪ್ರಕಟಣೆ ತಿಳಿಸಿದೆ.

ಕನ್ನಡಪ್ರಭ
ಮಂಗಳವಾರ 7.07.2026

# ಕಸ್ತೂರ್ಬಾ ಆಸ್ಪತ್ರೆ: 12 ಗಂಟೆಗಳ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

• **ಕನ್ನಡಪ್ರಭ ವಾರ್ತೆ** ಮಣಿಪಾಲ

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಅಪರೂಪದ, ಅತ್ಯಂತ ಸಂಕೀರ್ಣ ಮತ್ತು ಅತ್ಯಂತ ದೀರ್ಘಾವಧಿಯ ಶಸ್ತ್ರಕ್ರಿಯೆ ಯಶಸ್ವಿಯಾಗಿ ನಡೆಸಿದ್ದು, ರೋಗಿ ಚೇತರಿಸಿಕೊಂಡಿದ್ದಾರೆ.

ಶಿವಮೊಗ್ಗದ 63 ವರ್ಷದ ರೋಗಿಯು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಅವರನ್ನು ತಪಾಸಣೆಗೊಳಪಡಿಸಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್‌ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಈ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ವೆನಾ ಕ್ಯಾವಾ ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣದವರೆಗೆ ತಲುಪಿತ್ತು.

ಮೂತ್ರಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಅರುಣ್ ಚಾವ್ಲಾ ನೇತೃತ್ವದಲ್ಲಿ ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ ವಿಭಾಗದ ತಜ್ಞರು ಸಮನ್ವಯತೆಯಿಂದ ಶಸ್ತ್ರಚಿಕಿತ್ಸೆಯ ಸಮಗ್ರ ಯೋಜನೆ ರೂಪಿಸಿದರು. ರೋಗಿಯು ಮಧುಮೇಹ, ಅಧಿಕ ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ ಹಾಗೂ ಸೌಮ್ಯ ಹೃದಯ ಕಾಯಿಲೆಯಿಂದ ಬಳಲುತ್ತಿದ್ದರು. ಆದ್ದರಿಂದ ಮೊದಲು ಹೃದಯಶಾಸ್ತ್ರ ಮತ್ತು ಎಂಡೋಕ್ರಿನೊಲೊಜಿ ವಿಭಾಗಗಳ ತಜ್ಞರು ಅವರ ಸ್ಥಿತಿ ಮೌಲ್ಯಮಾಪನ ಮಾಡಿ, ಶಸ್ತ್ರಚಿಕಿತ್ಸೆಗೆ ಸೂಕ್ತವಾಗುವಂತೆ ಚಿಕಿತ್ಸೆ ನೀಡಿದರು.

ನಂತರ ಮೊದಲ ಹಂತದಲ್ಲಿ ಮೂತ್ರಶಾಸ್ತ್ರ ತಜ್ಞರು ಕ್ಯಾನ್ಸರ್ ಪೀಡಿತ ಮೂತ್ರಪಿಂಡ ತೆರವುಗೊಳಿಸಿದರು. ನಂತರ ಎದೆ - ಹೃದಯ ತಜ್ಞರು ಎದೆ ತೆರೆದು ರೋಗಿಯನ್ನು ತಾತ್ಕಾಲಿಕ ಹೃದಯ - ಶ್ವಾಸಕೋಶ ಯಂತ್ರಕ್ಕೆ ಸಂಪರ್ಕಿಸಿದರು. ನಂತರ, ಮೆದುಳು ಸೇರಿದಂತೆ ಪ್ರಮುಖ ಅಂಗಗಳನ್ನು ರಕ್ಷಿಸುವುದಕ್ಕಾಗಿ ರೋಗಿಯ ದೇಹದ ಉಷ್ಣತೆಯನ್ನು 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಲಾಯಿತು.

ಬಳಿಕ ರಕ್ತದ ಪರಿಚಲನೆ ಕೆಲಕಾಲ ಸಂಪೂರ್ಣ ಸ್ಥಗಿತಗೊಳಿಸಲಾಯಿತು. ಹೃದಯದ ಬಲ ಹೃತ್ಕರ್ಣ ಹಾಗೂ ಕೆಳಗಿನ ವೆನಾ ಕ್ಯಾವಗಳನ್ನು ಏಕಕಾಲದಲ್ಲಿ ತೆರೆದು ಗೆಡ್ಡೆ ಸುರಕ್ಷಿತವಾಗಿ ತೆರವುಗೊಳಿಸಲಾಯಿತು.

ಶಸ್ತ್ರಚಿಕಿತ್ಸೆಯ ನಂತರ ತೀವ್ರ ನಿಗಾ ಆರೈಕೆಯ ನಂತರ ಮೂರು ದಿನದಲ್ಲಿ ರೋಗಿಯು ನಡೆಯುವಷ್ಟು ಚೇತರಿಸಿಕೊಂಡರು. ಎರಡು ವಾರಗಳ ಬಳಿಕ ಆರೋಗ್ಯ ಸ್ಥಿರಗೊಂಡ ನಂತರ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಈ ಸಂಕೀರ್ಣ ಶಸ್ತ್ರಚಿಕಿತ್ಸೆಗೆ ಹೃದಯ ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಶ್ಯಾಮ್ ಕೆ. ಹಾಗೂ ಡಾ. ಗಣೇಶ್ ಕಾಮತ್, ಮೂತ್ರಶಾಸ್ತ್ರ ತಜ್ಞರಾದ ಡಾ. ಅರುಣ್ ಚಾವ್ಲಾ ಹಾಗೂ ಡಾ. ಜಿ. ವಿ. ಶ್ರೀನಾಥ್ ಪ್ರಮುಖ ಪಾತ್ರ ವಹಿಸಿದರು. ಅರಿವಳಿಕೆ ತಜ್ಞರಾದ ಡಾ. ವಿಜಯ್ ಕುಮಾರ್, ಡಾ. ಸಾಯಿ ಕೃಷ್ಣ ನೆರವು ನೀಡಿದರು.

THE TIMES OF INDIA, MANGALURU
TUESDAY, JULY 7, 2026

# Patient's blood circulation halted to remove tumour

Times News Network

**Udupi:** Stopping a patient's entire blood circulation to remove a tumour is extremely rare — and doctors at Kasturba Hospital, Manipal, did just that to treat a 63-year-old man from Shivamogga whose kidney cancer had reached the right chamber of his heart.

The surgery was planned jointly with the department of cardiothoracic and vascular surgery (CTVS).

On June 17, two teams carried out a 12-hour operation. The urology team opened the abdomen, removed the kidney, and freed the tumour from the vein. The CTVS team opened the chest, connected him to a heart-lung machine, and cooled the body to 22°C to protect vital organs as circulation was completely stopped — total circulatory arrest.

Working within a narrow window, surgeons opened the right atrium and inferior vena cava together and removed the tumour in one continuous piece. Clearance was confirmed using a thin camera.

The heart chamber was closed, the vena cava repaired, and circulation restarted. The patient was rewarmed, weaned off the heart-lung machine, and stabilised.

He remained on ventilator support for 12 hours, was off it successfully, was mobile within three days, and was discharged in stable condition about two weeks later.

The case was led by Dr Shyam K Ashok and Dr Ganesh Kamath (CTVS) and Dr Arun Chawla (urology), with Dr GV Srinadh. Anaesthetists Dr Vijaykumar and Dr Sai Krishna, the perfusion team, and the departments of cardiology, critical care, and endocrinology supported the procedure.

ಸಂಯುಕ್ತ ಕರ್ನಾಟಕ

# ಮಣಿಪಾಲ ಕೆಎಂಸಿ ಆಸ್ಪತ್ರೆಯಲ್ಲಿ ಯಶಸ್ವಿ ಸಂಕೀರ್ಣ ಶಸ್ತ್ರಚಿಕಿತ್ಸೆ

**ಸಂ.ಕ.ಸಮಾಚಾರ, ಉಡುಪಿ**

ಇಲ್ಲಿನ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಅಪರೂಪದ, ಅತ್ಯಂತ ಸಂಕೀರ್ಣ ಮತ್ತು ಅತ್ಯಂತ ದೀರ್ಘಾವಧಿಯ ಶಸ್ತ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಿದ್ದು, ರೋಗಿ ಚೇತರಿಸಿಕೊಂಡಿದ್ದಾರೆ.

ಶಿವಮೊಗ್ಗದ 63 ವರ್ಷದ ರೋಗಿ ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಅವರನ್ನು ತಪಾಸಣೆಗೊಳಪಡಿಸಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಅದು ದೇಹದ ಅತಿದೊಡ್ಡ ರಕ್ತನಾಳವಾದ ವೆನಾಕ್ಯಾವಾ ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣದ ವರೆಗೆ ತಲುಪಿತ್ತು.

ಮೂತ್ರಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಅರುಣ್ ಚಾವ್ಲಾ ನೇತೃತ್ವದಲ್ಲಿ ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ ವಿಭಾಗದ ತಜ್ಞರು ಸಮನ್ವಯತೆಯಿಂದ ಶಸ್ತ್ರಚಿಕಿತ್ಸೆಯ ಸಮಗ್ರ ಯೋಜನೆ ರೂಪಿಸಿದರು. ರೋಗಿ ಮಧುಮೇಹ, ಅಧಿಕ ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ ಹಾಗೂ ಸೌಮ್ಯ ಹೃದಯ ಕಾಯಿಲೆಯಿಂದ ಬಳಲುತ್ತಿದ್ದರು. ಆದ್ದರಿಂದ ಮೊದಲು ಹೃದಯಶಾಸ್ತ್ರ ಮತ್ತು ಎಂಡೋಕ್ರಿನೊಲೊಜಿ ವಿಭಾಗಗಳ ತಜ್ಞರು ಅವರ ಸ್ಥಿತಿಮೌಲ್ಯಮಾಪನ ಮಾಡಿ, ಶಸ್ತ್ರಚಿಕಿತ್ಸೆಗೆ ಸೂಕ್ತವಾಗುವಂತೆ ಚಿಕಿತ್ಸೆ ನೀಡಿದರು.


ನಂತರ ಮೊದಲ ಹಂತದಲ್ಲಿ ಮೂತ್ರಶಾಸ್ತ್ರ ತಜ್ಞರು ಕ್ಯಾನ್ಸರ್ ಪೀಡಿತ ಮೂತ್ರಪಿಂಡ ತೆರವುಗೊಳಿಸಿದರು. ನಂತರ ಎದೆ- ಹೃದಯ ತಜ್ಞರು ಎದೆ ತೆರೆದು ರೋಗಿಯನ್ನು ತಾತ್ಕಾಲಿಕ ಹೃದಯ- ಶ್ವಾಸಕೋಶ ಯಂತ್ರಕ್ಕೆ ಸಂಪರ್ಕಿಸಿ ಮೆದುಳು ಸೇರಿದಂತೆ ಪ್ರಮುಖ ಅಂಗಗಳನ್ನು ರಕ್ಷಿಸುವುದಕ್ಕಾಗಿ ರೋಗಿಯ ದೇಹದ ಉಷ್ಣತೆಯನ್ನು 22 ಡಿಗ್ರಿ ಸೆಲ್ಸಿಯಸ್‌ಗೆ ಇಳಿಸಲಾಯಿತು. ಬಳಿಕ ರಕ್ತದ ಪರಿಚಲನೆ ಕೆಲಕಾಲ ಸಂಪೂರ್ಣ ಸ್ಥಗಿತಗೊಳಿಸಲಾಯಿತು. ಹೃದಯದ ಬಲ ಹೃತ್ಕರ್ಣ ಹಾಗೂ ಕೆಳಗಿನ ವೆನಾಕ್ಯಾವಗಳನ್ನು ಏಕಕಾಲದಲ್ಲಿ ತೆರೆದು ಸುರಕ್ಷಿತವಾಗಿ ಗಡ್ಡೆಯನ್ನು ತೆರವುಗೊಳಿಸಲಾಯಿತು. ಶಸ್ತ್ರಚಿಕಿತ್ಸೆಯ ನಂತರ ತೀವ್ರ ನಿಗಾ ಆರೈಕೆಯ ನಂತರ ಮೂರು ದಿನದಲ್ಲಿ ರೋಗಿ ನಡೆಯುವಷ್ಟು ಚೇತರಿಸಿಕೊಂಡರು. 2 ವಾರಗಳ ಬಳಿಕ ಆರೋಗ್ಯ ಸ್ಥಿರಗೊಂಡ ನಂತರ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.

ಈ ಸಂಕೀರ್ಣ ಶಸ್ತ್ರಚಿಕಿತ್ಸೆಗೆ ಹೃದಯ ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ಶ್ಯಾಮ್ ಕೆ. ಹಾಗೂ ಡಾ.ಗಣೇಶ್ ಕಾಮತ್, ಮೂತ್ರಶಾಸ್ತ್ರ ತಜ್ಞರಾದ ಡಾ.ಅರುಣ್ ಚಾವ್ಲಾ ಹಾಗೂ ಡಾ.ಜಿ.ವಿ. ಶ್ರೀನಾಥ್ ಪ್ರಮುಖ ಪಾತ್ರ ವಹಿಸಿದರು. ಅರಿವಳಿಕೆ ತಜ್ಞರಾದ ಡಾ.ವಿಜಯ್ ಕುಮಾರ್, ಡಾ.ಸಾಯಿಕೃಷ್ಣ ನೆರವು ನೀಡಿದರು.

ನ್

## UDAYAVANI

**LINK:** https://uvnews.in/rpg9uoi




TEAM UDAYAVANI — Share

Manipal: Doctors at Kasturba Hospital, Manipal, a unit of Manipal Academy of Higher Education (MAHE), have successfully treated a 63-year-old man from Shivamogga whose kidney cancer had grown along the body's largest vein and reached the right chamber of his heart, one of the most demanding situations in cancer care.

The patient presented with abdominal pain of one month's duration. Scans revealed a large cancerous tumor in his left kidney with a tumor thrombus, a solid extension of the cancer, that had traveled up the inferior vena cava (the major vein carrying blood back to the heart) all the way into the heart's right upper chamber. This is the most advanced form of such a spread and, if left untreated, can be life-threatening.

The patient was admitted under Dr. Arun Chawla, Professor and Head of Unit, Department of Urology, whose team planned the operation jointly with the Department of Cardiothoracic and Vascular Surgery (CTVS). As the patient also lives with diabetes, high blood pressure, a thyroid condition, and mild heart disease, the Cardiology and Endocrinology teams first assessed and optimized him for surgery.

On 17 June 2026, two surgical teams came together in a single operating theatre for a grueling 12-hour procedure. The urology team began by opening the abdomen, removing the cancerous kidney, and freeing the tumor along the vein.

**UDAYAVANI**

**LINK:** https://uvnews.in/gyxo0jj

ಉದಯವಾಣಿ
UV English
Search News
ಕ್ರೈಮ್
ವೈವಿಧ್ಯ
ಶಿಕ್ಷಣ / ಉದ್ಯೋಗ
ಆರೋಗ್ಯ
ಅನಿವಾಸಿ ಕನ್ನಡಿಗ
ಸೆಲೆಬ್ರಿಟಿ ಕಾರ್ನರ್
Explainer
ಜ್ಯೋತಿಷ್ಯ
ರಾಶಿ ಫಲ
ಪುಟಾಣಿ ಪ್ರಪಂಚ
ವೀಡಿಯೊ ಗ್ಯಾಲರಿ
ಫೋಟೋ ಗ್ಯಾಲರಿ
ರೀಲ್ಸ್

## KMC Manipal: **ಮೂತ್ರಪಿಂಡದಿಂದ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿದ್ದ ಗೆಡ್ಡೆ ತೆರವು!**

ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ...ಶಿವಮೊಗ್ಗದ 63 ವರ್ಷದ ವ್ಯಕ್ತಿ ಚೇತರಿಕೆ



ADVERTISEMENT

TEAM UDAYAVANI

Share

**ಮಣಿಪಾಲ:** ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯದತ್ತ ಮರಳುವಂತೆ ಮಾಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ (Inferior Vena Cava-IVC) ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

ರೋಗಿಯು ಸುಮಾರು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆ ಮತ್ತು ಸ್ಕ್ಯಾನ್‌ಗಳಲ್ಲಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಜತೆಗೆ, ಆ ಗೆಡ್ಡೆಯು ಟ್ಯೂಮರ್ ಥ್ರಂಬಸ್ (Tumor Thrombus) ರೂಪದಲ್ಲಿ ಕೆಳಮಟ್ಟದ ವೆನಾ ಕ್ಯಾವಾ (ಹೃದಯಕ್ಕೆ ರಕ್ತವನ್ನು ಮರಳಿ ಸಾಗಿಸುವ ಪ್ರಮುಖ ರಕ್ತನಾಳ) ಮೂಲಕ ವಿಸ್ತರಿಸಿ, ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿರುವುದು ದೃಢಪಟ್ಟಿತು. ಮೂತ್ರಪಿಂಡದ ಕ್ಯಾನ್ಸರ್‌ನಲ್ಲಿ ಇಂತಹ ಹರಡುವಿಕೆಯು ಅತ್ಯಂತ ಮುಂದುವರಿದ ಹಾಗೂ ಚಿಕಿತ್ಸೆಗೆ ಸವಾಲಿನ ಹಂತವೆಂದು ಪರಿಗಣಿಸಲಾಗುತ್ತದೆ ಮತ್ತು ಚಿಕಿತ್ಸೆ ನೀಡದಿದ್ದರೆ, ಜೀವಕ್ಕೆ ಅಪಾಯಕಾರಿಯಾಗುತಿತ್ತು.

ರೋಗಿಯನ್ನು ಮೂತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಘಟಕದ ಮುಖ್ಯಸ್ಥರಾದ ಡಾ. ಅರುಣ್ ಚಾವ್ಲಾ ಅವರ ನೇತೃತ್ವದಲ್ಲಿ ದಾಖಲಿಸಿಕೊಳ್ಳಲಾಯಿತು. ಅವರ ನೇತೃತ್ವದ ಮೂತ್ರಶಾಸ್ತ್ರ ತಂಡವು, ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸೆ (CTVS) ವಿಭಾಗದ ತಜ್ಞರೊಂದಿಗೆ ಸಮನ್ವಯ ಸಾಧಿಸಿ ಶಸ್ತ್ರಚಿಕಿತ್ಸೆಯ ಸಮಗ್ರ ಯೋಜನೆಯನ್ನು ರೂಪಿಸಿತು. ರೋಗಿಯು ಮಧುಮೇಹ, ಅಧಿಕ ರಕ್ತದೊತ್ತಡ, ಥೈರಾಯ್ಡ್ ಸಮಸ್ಯೆ ಹಾಗೂ ಸೌಮ್ಯ ಹೃದಯ ಕಾಯಿಲೆಯಿಂದ ಬಳಲುತ್ತಿದ್ದ ಕಾರಣ, ಹೃದಯಶಾಸ್ತ್ರ ಮತ್ತುಎಂಡೋಕ್ರಿನೊಲೊಜಿ ವಿಭಾಗಗಳ ತಜ್ಞರು ಮೊದಲು ಅವರ ಆರೋಗ್ಯ ಸ್ಥಿತಿಯನ್ನು ಸಮಗ್ರವಾಗಿ ಮೌಲ್ಯಮಾಪನ ಮಾಡಿ, ಶಸ್ತ್ರಚಿಕಿತ್ಸೆಗೆ ಸೂಕ್ತವಾಗುವಂತೆ ಚಿಕಿತ್ಸೆ ನೀಡಿದರು.


**KARAVALI TIMES**

**LINK:** https://www.karavalitimes.news/2026/07/ud_01396532010.html?m=1

ಕರಾವಳಿ

# ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದಲ್ಲಿ ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

7/06/2026 05:41:00 PM



ಮಣಿಪಾಲ: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE)ನ ಅಂಗಸಂಸ್ಥೆಯಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯದತ್ತ ಮರಳುವಂತೆ ಮಾಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ (Inferior Vena Cava–IVC) ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

ರೋಗಿಯು ಸುಮಾರು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆ ಮತ್ತು ಸ್ಕ್ಯಾನ್‌ಗಳಲ್ಲಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಜೊತೆಗೆ, ಆ ಗೆಡ್ಡೆಯು ಟ್ಯೂಮರ್ ಥ್ರಂಬಸ್ (Tumor Thrombus) ರೂಪದಲ್ಲಿ ಕೆಳಮಟ್ಟದ ವೆನಾ ಕ್ಯಾವಾ (ಹೃದಯಕ್ಕೆ ರಕ್ತವನ್ನು ಮರಳಿ ಸಾಗಿಸುವ ಪ್ರಮುಖ ರಕ್ತನಾಳ) ಮೂಲಕ ವಿಸ್ತರಿಸಿ, ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿರುವುದು ದೃಢಪಟ್ಟಿತು. ಮೂತ್ರಪಿಂಡದ ಕ್ಯಾನ್ಸರ್‌ನಲ್ಲಿ ಇಂತಹ ಹರಡುವಿಕೆಯು ಅತ್ಯಂತ ಮುಂದುವರಿದ ಹಾಗೂ ಚಿಕಿತ್ಸೆಗೆ ಸವಾಲಿನ ಹಂತವೆಂದು ಪರಿಗಣಿಸಲಾಗುತ್ತದೆ ಮತ್ತು ಚಿಕಿತ್ಸೆ ನೀಡದಿದ್ದರೆ, ಜೀವಕ್ಕೆ ಅಪಾಯಕಾರಿಯಾಗುತಿತ್ತು.

**RB NEWS KANNADA**

**LINK:** https://rbnewskannada.in/ಕಸ್ತೂರ್ಬಾ-ಆಸ್ಪತ್ರೆ-ಮಣಿಪ/

[t4b-ticker]

# ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದಲ್ಲಿ ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

RB NEWS Bureau Report




*ಮೂತ್ರಪಿಂಡದಿಂದ ಹೃದಯದ ಬಲ ಹೃತ್ಕರ್ಣ ದ ವರೆಗೆ ಹರಡಿದ್ದ ಗೆಡ್ಡೆಯನ್ನು ಯಶಸ್ವಿಯಾಗಿ ತೆರವು, ಮೂತ್ರಶಾಸ್ತ್ರ ಹಾಗೂ ಹೃದಯ ಶಸ್ತ್ರ ಚಿಕಿತ್ಸಾ ತಜ್ಞರ ಸಮನ್ವಯದಿಂದ ಶಿವಮೊಗ್ಗದ 63 ವರ್ಷದ ವ್ಯಕ್ತಿ ಚೇತರಿಕೆ*

ಮಣಿಪಾಲ, 06.07.2026: ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE)ನ ಅಂಗಸಂಸ್ಥೆಯಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯದತ್ತ ಮರಳುವಂತೆ ಮಾಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ (Inferior Vena Cava-IVC) ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

**KEMMANNU.COM**

**LINK:** https://kemmannu.com/index.php?action=topstory&type=29761



## Kasturba Hospital, Manipal, removes a kidney Tumor that had spread into the heart

*Richard D'Souza*
***Kemmannu News Network, 06-07-2026 15:18:47***



Manipal, 06.07.2026: Doctors at Kasturba Hospital, Manipal, a unit of Manipal Academy of Higher Education (MAHE), have successfully treated a 63-year-old man from Shivamogga whose kidney cancer had grown along the body's largest vein and reached the right chamber of his heart, one of the most demanding situations in cancer care.



The patient presented with abdominal pain of one month's duration. Scans revealed a large cancerous tumor in his left kidney with a tumor thrombus, a solid extension of the cancer, that had traveled up the inferior vena cava (the major vein carrying blood back to the heart) all the way into the heart's right upper chamber. This is the most advanced form of such a spread and, if left untreated, can be life-threatening.

The patient was admitted under Dr. Arun Chawla, Professor and Head of Unit, Department of Urology, whose team planned the operation jointly with the Department of Cardiothoracic and Vascular Surgery (CTVS). As the patient also lives with diabetes, high blood pressure, a thyroid condition, and mild heart disease, the Cardiology and Endocrinology teams first assessed and optimized him for surgery.

On 17 June 2026, two surgical teams came together in a single operating theatre for a grueling 12-hour procedure. The urology team began by opening the abdomen, removing the cancerous kidney, and freeing the tumor along the vein.

**DAIJIWORLD.COM**

**LINK:** https://share.google/paM65FiYWB7QRFqU9

# Kasturba Hospital doctors remove kidney tumour that had spread into heart in rare 12-hr surgery

Mon, Jul 06 2026 09:52:02 PM

*Media Release*

**Udupi, July 6:** Doctors at Kasturba Hospital, Manipal, a unit of the Manipal Academy of Higher Education (MAHE), have successfully treated a 63-year-old man from Shivamogga whose kidney cancer had extended through a major vein into the right chamber of the heart, in one of the most complex oncological procedures undertaken at the institution.

The patient initially presented with abdominal pain of one month's duration. Investigations revealed a large malignant tumour in the left kidney with a tumour thrombus—an extension of the cancer—that had travelled through the inferior vena cava (the body's largest vein carrying blood back to the heart) and reached the right atrium. Doctors said this represents an advanced, potentially life-threatening form of cancer spread if left untreated.




The patient was admitted under Dr Arun Chawla, professor and head of unit, Department of Urology, and evaluated jointly with the Department of Cardiothoracic and Vascular Surgery (CTVS). Given his comorbidities, including diabetes, hypertension, thyroid disorder and mild cardiac disease, he was first assessed and optimised by cardiology and endocrinology teams prior to surgery.

**UDUPI XPRESS**

**LINK:** https://udupixpress.com/rare-surgery-successful-at-manipals-kasturba-hospital-cancerous-tumor-extending-from-the-kidney-to-the-heart-removeda-rare-achievement-by-medical-specialists/

# ಮಣಿಪಾಲ ಕಸ್ತೂರ್ಬಾ ಆಸ್ಪತ್ರೆಯಲ್ಲಿ ಯಶಸ್ವಿಯಾಯ್ತು ಅಪರೂಪದ ಶಸ್ತ್ರಚಿಕಿತ್ಸೆ: ಮೂತ್ರಪಿಂಡದಿಂದ ಹೃದಯದವರೆಗೆ ಹರಡಿದ್ದ ಕ್ಯಾನ್ಸರ್ ಗೆಡ್ಡೆ ತೆರವು: ತಜ್ಞವೈದ್ಯರ ಅಪರೂಪದ ಸಾಧನೆಯಿದು

July 6, 2026



ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆ ದೇಹದ ಪ್ರಮುಖ ರಕ್ತನಾಳವಾದ ಇನ್ಫೀರಿಯರ್ ವೆನಾ ಕ್ಯಾವಾ (IVC) ಮೂಲಕ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿದ್ದು ಸುಮಾರು 12 ಗಂಟೆಗಳ ಕಾಲ ನಡೆದ ಶಸ್ತ್ರಚಿಕಿತ್ಸೆಯಲ್ಲಿ ಅದನ್ನು ಸಂಪೂರ್ಣವಾಗಿ ಯಶಸ್ವಿಯಾಗಿ ತೆರವುಗೊಳಿಸಲಾಗಿದೆ.

ರೋಗಿಯು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆಯಲ್ಲಿ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದು ಹಾಗೂ ಅದು ಹೃದಯದವರೆಗೆ ವಿಸ್ತರಿಸಿರುವುದು ಪತ್ತೆಯಾಗಿತ್ತು.

ಚಿಕಿತ್ಸೆ ನೀಡದಿದ್ದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇತ್ತು.ಡಾ. ಅರುಣ್ ಚಾವ್ಲಾ ಅವರ ನೇತೃತ್ವದ ಮೂತ್ರಶಾಸ್ತ್ರ ತಂಡ ಮತ್ತು ಡಾ. ಶ್ಯಾಮ್ ಕೆ. ಅಶೋಕ್ ಹಾಗೂ ಡಾ. ಗಣೇಶ್ ಕಾಮತ್ ಅವರ ನೇತೃತ್ವದ ಹೃದಯ, ಎದೆ ಮತ್ತು ರಕ್ತನಾಳಗಳ ಶಸ್ತ್ರಚಿಕಿತ್ಸಾ (CTVS) ತಂಡ ಜಂಟಿಯಾಗಿ ಈ ಅಪರೂಪದ ಶಸ್ತ್ರಚಿಕಿತ್ಸೆ ನಡೆಸಿತು.

ಹೃದಯ-ಶ್ವಾಸಕೋಶ ಯಂತ್ರದ ನೆರವಿನಿಂದ ರೋಗಿಯ ರಕ್ತಪರಿಚಲನೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಹೃದಯ ಹಾಗೂ ಪ್ರಮುಖ ರಕ್ತನಾಳದಿಂದ ಗೆಡ್ಡೆಯನ್ನು ಒಂದೇ ತುಂಡಿನಲ್ಲಿ ಯಶಸ್ವಿಯಾಗಿ ಹೊರತೆಗೆಯಲಾಯಿತು.

ಶಸ್ತ್ರಚಿಕಿತ್ಸೆಯ ಬಳಿಕ ರೋಗಿಯನ್ನು ಐಸಿಯುನಲ್ಲಿ ವೆಂಟಿಲೇಟರ್ ಬೆಂಬಲದಲ್ಲಿ ಇರಿಸಲಾಗಿದ್ದು, ಬಳಿಕ ಅವರು ಚೇತರಿಸಿಕೊಂಡು ಮೂರು ದಿನಗಳಲ್ಲೇ ನಡೆಯಲು ಆರಂಭಿಸಿದರು. ಸುಮಾರು ಎರಡು ವಾರಗಳ ಚಿಕಿತ್ಸೆಯ ನಂತರ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದ್ದು, ಪ್ರಸ್ತುತ ಶಿವಮೊಗ್ಗದಲ್ಲಿ ವೈದ್ಯರ ಸಲಹೆಯಂತೆ ಚೇತರಿಸಿಕೊಳ್ಳುತ್ತಿದ್ದಾರೆ.

**TULUNADU VARTHE**

**LINK:** https://tulunaduvarthe.com/rare-complex-surgery-successful-at-kasturba-hospital-manipal/

ಮಣಿಪಾಲ

# ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದಲ್ಲಿ ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

By **TNVOffice** - July 7, 2026 0



**ಮೂತ್ರಪಿಂಡದಿಂದ ಹೃದಯದ ಬಲ ಹೃತ್ಕರ್ಣ ದ ವರೆಗೆ ಹರಡಿದ್ದ ಗೆಡ್ಡೆಯನ್ನು ಯಶಸ್ವಿಯಾಗಿ ತೆರವು, ಮೂತ್ರಶಾಸ್ತ್ರ ಹಾಗೂ ಹೃದಯ ಶಸ್ತ್ರಚಿಕಿತ್ಸಾ ತಜ್ಞರ ಸಮನ್ವಯದಿಂದ ಶಿವಮೊಗ್ಗದ 63 ವರ್ಷದ ವ್ಯಕ್ತಿ ಚೇತರಿಕೆ**

**ಮಣಿಪಾಲ :** ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE)ನ ಅಂಗಸಂಸ್ಥೆಯಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯದತ್ತ ಮರಳುವಂತೆ ಮಾಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ (Inferior Vena Cava–IVC) ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

**KARAVALI XPRESS**

**LINK:** https://www.karavalixpress.in/2026/07/MAHE.html



# ಕಸ್ತೂರ್ಬಾ ಆಸ್ಪತ್ರೆ, ಮಣಿಪಾಲದಲ್ಲಿ ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ

KaravaliXpress~Janardhan Kodavoor ಜುಲೈ 07, 2026



ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (MAHE)ನ ಅಂಗಸಂಸ್ಥೆಯಾದ ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಯ ವೈದ್ಯರು, ಶಿವಮೊಗ್ಗದ 63 ವರ್ಷದ ವ್ಯಕ್ತಿಗೆ ಅಪರೂಪದ ಹಾಗೂ ಅತ್ಯಂತ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿ ಆರೋಗ್ಯದತ್ತ ಮರಳುವಂತೆ ಮಾಡಿದ್ದಾರೆ. ರೋಗಿಯ ಎಡ ಮೂತ್ರಪಿಂಡದಲ್ಲಿ ಉಂಟಾಗಿದ್ದ ಕ್ಯಾನ್ಸರ್ ಗೆಡ್ಡೆಯು ದೇಹದ ಅತಿದೊಡ್ಡ ರಕ್ತನಾಳವಾದ ಕೆಳಮಟ್ಟದ ವೆನಾ ಕ್ಯಾವಾ (Inferior Vena Cava-IVC) ಮೂಲಕ ಹರಡಿ ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿತ್ತು. ಇಂತಹ ಸ್ಥಿತಿಯು ಮೂತ್ರಪಿಂಡದ ಕ್ಯಾನ್ಸರ್‌ನ ಅತ್ಯಂತ ಸಂಕೀರ್ಣ ಹಾಗೂ ಅಪರೂಪದ ಹಂತಗಳಲ್ಲಿ ಒಂದಾಗಿದೆ.

ರೋಗಿಯು ಸುಮಾರು ಒಂದು ತಿಂಗಳಿನಿಂದ ಹೊಟ್ಟೆನೋವಿನಿಂದ ಬಳಲುತ್ತಿದ್ದರು. ತಪಾಸಣೆ ಮತ್ತು ಸ್ಕ್ಯಾನ್‌ಗಳಲ್ಲಿ ಅವರ ಎಡ ಮೂತ್ರಪಿಂಡದಲ್ಲಿ ದೊಡ್ಡ ಗಾತ್ರದ ಕ್ಯಾನ್ಸರ್ ಗೆಡ್ಡೆ ಇರುವುದನ್ನು ಪತ್ತೆಹಚ್ಚಲಾಯಿತು. ಜೊತೆಗೆ, ಆ ಗೆಡ್ಡೆಯು ಟ್ಯೂಮರ್ ಥ್ರಂಬಸ್ (Tumor Thrombus) ರೂಪದಲ್ಲಿ ಕೆಳಮಟ್ಟದ ವೆನಾ ಕ್ಯಾವಾ (ಹೃದಯಕ್ಕೆ ರಕ್ತವನ್ನು ಮರಳಿ ಸಾಗಿಸುವ ಪ್ರಮುಖ ರಕ್ತನಾಳ) ಮೂಲಕ ವಿಸ್ತರಿಸಿ, ಹೃದಯದ ಬಲ ಹೃತ್ಕರ್ಣ ದ ವರೆಗೆ ತಲುಪಿರುವುದು ದೃಢಪಟ್ಟಿತು. ಮೂತ್ರಪಿಂಡದ ಕ್ಯಾನ್ಸರ್‌ನಲ್ಲಿ ಇಂತಹ ಹರಡುವಿಕೆಯು ಅತ್ಯಂತ ಮುಂದುವರಿದ ಹಾಗೂ ಚಿಕಿತ್ಸೆಗೆ ಸವಾಲಿನ ಹಂತವೆಂದು ಪರಿಗಣಿಸಲಾಗುತ್ತದೆ ಮತ್ತು ಚಿಕಿತ್ಸೆ ನೀಡದಿದ್ದರೆ, ಜೀವಕ್ಕೆ ಅಪಾಯಕಾರಿಯಾಗುತಿತ್ತು.

facebook

**LINK:** https://www.facebook.com/share/p/1MBe7p5nYj/

**Udayavani English's post**

Udayavani English

6d ·

Kasturba Hospital, Manipal, removes a kidney Tumor that had spread into the heart

#KasturbaHospital #Manipal #KidneyTumor #RareSurgery



UDAYAVANI.COM

Kasturba Hospital, Manipal, removes a kidney Tumor that had spread into the heart | Udayavani - Latest English News, Udayavani Newspaper

1

facebook

**LINK:** https://www.facebook.com/share/p/1BrHfnkQ2T/

**Udayavani's post**

Udayavani

6d ·

ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ...ಶಿವಮೊಗ್ಗದ 63 ವರ್ಷದ ವ್ಯಕ್ತಿ ಚೇತರಿಕೆ :-
https://uvnews.in/gyxo0jj

#Udayavani #KmcManipal #KidneyTumor



UDAYAVANI.COM

KMC Manipal: ಮೂತ್ರಪಿಂಡದಿಂದ ಹೃದಯದ ಬಲ ಹೃತ್ಕರ್ಣದವರೆಗೆ ಹರಡಿದ್ದ ಗೆಡ್ಡೆ ತೆರವು! | Udayavani - Latest Kannada News, Udayavani Newspaper

**TWITTER**

**LINK:** https://x.com/UvEnglish/status/2074119813434388836

Rare complex surgery successful; 63-year-old Shivamogga man recovers

#KasturbaHospital #Manipal #KidneyTumor #RareSurgery




From udayavani.com

1:14 PM · Jul 6, 2026 · **44** Views

**TWITTER**

**LINK:** https://x.com/udayavani_web/status/2074123843220951238?s=20

# Post

**Udayavani**
@udayavani_web

ಅಪರೂಪದ ಸಂಕೀರ್ಣ ಶಸ್ತ್ರಚಿಕಿತ್ಸೆ ಯಶಸ್ವಿ...ಶಿವಮೊಗ್ಗದ 63 ವರ್ಷದ ವ್ಯಕ್ತಿ ಚೇತರಿಕೆ :-
uvnews.in/gyxo0jj
#Udayavani #KmcManipal #KidneyTumor




From udayavani.com

1:30 PM · Jul 6, 2026 · **213** Views